# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/83/14-15

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

ದಿನಾಂಕ : 05-08-2016

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ಜಿ.ಎಲ್ ರಂಗಾರೆಡ್ಡಿ ತಂದೆ ಲೇಟ್ ಲಕ್ಷ್ಮೀರೆಡ್ಡಿ<br>2)ಶ್ರೀ ಜಿ ಎಲ್ ನಾಗಭೂಷಣ ರೆಡ್ಡಿ ತಂದೆ ಲೇಟ್ ಲಕ್ಷ್ಮೀರೆಡ್ಡಿ<br>ಗುಡದೂರು ಗ್ರಾಮ ಬಳ್ಳಾರಿ ತಾಲೂಕು<br><br>**ಶ್ರೀ ವೀರನಗೌಡ ವಕೀಲರು ಬಳ್ಳಾರಿ** | 1) ತಹಶೀಲ್ದಾರರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಬಳ್ಳಾರಿ<br>3)ಗ್ರಾಮ ಲೆಕ್ಕಾಧಿಕಾರಿಗಳು ಬಾಣಪುರ<br>4)ಜಿ.ಎಲ್.ಪುರುಶೋತ್ತಮ ರೆಡ್ಡಿ ತಂದೆ ಲೇಟ್ ಲಕ್ಷ್ಮೀ ರೆಡ್ಡಿ<br>ಗುಡುದೂರು ಗ್ರಾಮ ಬಳ್ಳಾರಿ ತಾಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಬಾಣಾಪುರ | 1/ಎ/2 | 5.37 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಮೋಕಾ ಇವರ ಎಂ ಆರ್ ನಂ 78/06-07 ದಿನಾಂಕ 23/07/2007 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 10-04-2015, 09-10-2015, ಮತ್ತು 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಬಾಣಾಪುರ ಗ್ರಾಮದ ಸ.ನಂ 1/ಎ/2 ವಿಸ್ತೀರ್ಣ: 5.37 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಮೋಕಾ ಇವರ ಎಂ ಆರ್ ನಂ 78/06-07 ದಿನಾಂಕ 23/07/2007 ರ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಹೊರಗಡೆ ವಿವಾದವನ್ನು ಇತ್ಯರ್ಥ ಪಡಿಸಿಕೊಂಡಿರುವುದಾಗಿ ತಿಳಿಸಿ, ಮೇಲ್ಮನವಿಯನ್ನು ಹಿಂಪಡೆಯಲು ಕೋರಿ ಈ ನ್ಯಾಯಾಲಯಕ್ಕೆ ಮೆಮೊ (NOT PRESS MEMO) ನ್ನು ಸಲ್ಲಿಸಿರುತ್ತಾರೆ.

ಕಾರಣ ಸದರಿ ಪ್ರಕರಣವನ್ನು ಮುಂದುವರೆಸಲು ಆಸಕ್ತಿ ಇಲ್ಲವೆಂದು ತಿಳಿಸಿ ವಾದಿಪರ ವಕೀಲರು ಮೆಮೋ (NOT PRESS MEMO) ಸಲ್ಲಿಸಿರುವ ಮೇರೆಗೆ ಹಾಗೂ ಮುಕ್ತಾಯಗೊಳಿಸಲು ಕೋರಿ ಸಹಿ ಮಾಡಿ ಒಪ್ಪಿಗೆಯನ್ನು ಸೂಚಿಸಿರುವುದರಿಂದ ಈ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸುವ ಕುರಿತು ಈ ಕೆಳಕಂಡಂತೆ ಆದೇಶಿಸಲಾಗಿದೆ.

## :: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಬಾಣಾಪುರ ಗ್ರಾಮದ ಸ.ನಂ 1/ಎ/2 ವಿಸ್ತೀರ್ಣ: 5.37 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ಮೆಮೋ (NOT PRESS MEMO) ರ ಮೇಲ್ಮನವಿಯನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸುತ್ತಾ; ವಜಾ ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ **ದಿನಾಂಕ: 05-08-2016**ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು
ಬಳ್ಳಾರಿ.

**ಪ್ರತಿಯನ್ನು : ವಾದಿ ಪ್ರತಿವಾದಿಗಳಿಗೆ ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ ಮಾಹಿತಿಗಾಗಿ.**